ಸಾಕ್ಷಿಯನ್ನು ದಿಃ **28.10.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಎನ್.ಎ. ವಕೀಲರಿಂದ:

ಸರ್ವೇ ನಂ.46/15 ರಲ್ಲಿ 1 ನೇ ಚಿಕ್ಕಲಕ್ಕೇಗೌಡರಿಗೆ, 2 ನೇ ಜವರೇಗೌಡರಿಗೆ, 3 ನೇ ಗೌಡಯ್ಯ ಊರುಫ್ ಗೌಡಪ್ಪರವರಿಗೆ 5 ಗುಂಟೆ ಜಮೀನಿನಲ್ಲಿ 3 ಜನರಿಗೂ ಮನೆ ಇತ್ತು. ಸದರಿ 1 ಮತ್ತು 2 ನೇ ವ್ಯಕ್ತಿಗಳ ಮನೆಗಳ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಎರಡೂ ಮನೆಗಳನ್ನು ನಾನು ನೋಡಿದ್ದೇನೆ. ಸದರಿ 2 ಮನೆಗಳು ಗಹಿಂದಿನ ಕಾಲದ ಮಾಳಗಿ ಮನೆಗಳಾಗಿದ್ದವು. ಸದರಿ ಎರಡು ಮನೆಗಳು 30-40 ವರ್ಷಗಳ ಹಿಂದೆ ಬಿದ್ದು ಹೋಗಿರುತ್ತೇವೆ. ನನ್ನ ತಾತ ಗೌಡಯ್ಯ ಊರುಫ್ ಗೌಡಯ್ಯರವರ ಮನೆಯ ವಿಸ್ತೀರ್ಣ ಪೂರ್ವ – ಪಶ್ಚಿಮ 80 ಮತ್ತು ಉತ್ತರ -ದಕ್ಷಿಣ 40 ಇತ್ತು.

ಚಿಕ್ಕ ಲಕ್ಕೇಗೌಡರ ಮನೆಯ ಚೆಕ್ಕು ಬಂದಿ ಪೂರ್ವಕ್ಕೆಃಜವರೇಗೌಡರ ಮನೆ, ಪಶ್ಚಿಮಕ್ಕೆಃ ನಮ್ಮ ಅಜ್ಜಿ ಪರಿವರ್ತನೆ ಮಾಡಿಕೊಟ್ಟ ಮರಿಯಪ್ಪನವರ ಜಾಗ, ಉತ್ತರಕ್ಕೆಃನಮ್ಮ ತಾತನ ಮನೆ ಮತ್ತು ದಕ್ಷಿಣಕ್ಕೆಃ ಚಿಕ್ಕ ಲಕ್ಕೇಗೌಡರ ಅಣ್ಣ ಹುಚ್ಚೇಗೌಡರ ಜಮೀನು. ಜವರೇಗೌಡರ ಮನೆಯ ಚೆಕ್ಕು ಬಂದಿ ಪೂರ್ವಕ್ಕೆಃಬ್ಯಾಟಯ್ಯನವರ ಜಮೀನು, ಪಶ್ಚಿಮಕ್ಕೆಃ ನಮ್ಮ ದೊಡ್ಡ ತಾತ ಚಿಕ್ಕಲಕ್ಕೇಗೌಡರ ವಾಸದ ಮನೆ, ಉತ್ತರಕ್ಕೆಃನಮ್ಮ ತಾತನ ಮನೆ ಮತ್ತು ದಕ್ಷಿಣಕ್ಕೆಃ ಜವರೇಗೌಡರ ಕುಟುಂಬದ ಆಸ್ತಿ. ನನ್ನ ತಾತನಿಗೆ ಬಂದಿದ್ದ ಮಾಳಿಗೆ ಮನೆ 25 ವರ್ಷಗಳ ಹಿಂದೆ ಬಿದ್ದು ಹೋಗಿರುತ್ತದೆ. ಸರ್ವೇ

ನಂ.46/15 ರಲ್ಲಿ ಈಗ ಮನೆಗಳಿಲ್ಲದೇ ಖಾಲಿ ಜಾಗವಾಗಿ ಉಳಿದಿದೆ ಎಂದರೆ ಕಲ್ಲುಗಳ ಗುರುತು ಇದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಜಮೀನು ಈಗ ಯಾವ ರೂಪದಲ್ಲಿದೆ ಎಂದು ನ್ಯಾಯಾಲಯದಿಂದ ಆಯುಕ್ತಕರನ್ನು ನೇಮಿಸಿದರೆ ನನ್ನದು ಅಭ್ಯಂತರ ಇಲ್ಲ ಎಂದರೆ ಸರಿ.

1 ನೇ ಚಿಕ್ಕಲಕ್ಕೇಗೌಡ ಮತ್ತು 2 ನೇ ಜವರೇಗೌಡರ ಹೆಸರಿನಲ್ಲಿ ಖಾತೆ ಆಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಹೇಳಿದಂತೆ ಮನೆಗಳಿದ್ದರೆ 1 ನೇ ಚಿಕ್ಕಲಕ್ಕೇಗೌಡರಿಗೆ ಮತ್ತು 2 ನೇ ಜವರೇಗೌಡರಿಗೆ ಖಾತೆ ಆಗಿರುತ್ತಿತ್ತು ಎಂದರೆ ಸಾಕ್ಷಿಯು ಅವರು ಮಾಡಿಸಿಕೊಂಡಿದ್ದರೆ ಆಗುತ್ತಿತ್ತು ಎಂದು ನುಡಿಯುತ್ತಾರೆ. ಖಾಲಿ ಜಾಗಕ್ಕೆ ಕಂದಾಯ ಪಡೆಯುದಿಲ್ಲ, ಆ ರೀತಿ ಕಂದಾಯ ಪಡೆದಿದ್ದರೆ ನಿವೇಶನಕ್ಕೆ ಎಂದು ಕಂದಾಯ ಪಡೆಯುತ್ತಾರೆ ಎಂದರೆ ಸಾಕ್ಷಿಯು ತಾವು ನಿವೇಶನಕ್ಕೆ ಎಂದು ಕಟ್ಟಿದ್ದೇವೆ ಎಂದು ನುಡಿಯುತ್ತಾರೆ. ನಿಡಿ.12 ರಿಂದ 14 ರಲ್ಲಿ ಕಂದಾಯ ನಿವೇಶನಕ್ಕೆಂದು ಬರೆದಿಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಗೂ ನಿಡಿ.12 ರಿಂದ 14 ರ ಆಸ್ತಿಯ ನಂಬರಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಿಡಿ.10 ಮತ್ತು 11 ರಲ್ಲಿ ಖಾಲಿ ಬಿದ್ದಿರುವ ಜಾಗ ನಿವೇಶನ ಎಂದು ನಮೂದು ಆಗಿಲ್ಲ ಎಂದರೆ ಸರಿ. ಹಾಲಿ ಪ್ರತಿವಾದಿ ವಾಸವಿರುವ ಮನೆ ಹೆಂಚಿನ ಮನೆಯಾಗಿರುತ್ತದೆ. ಸದರಿ ಮನೆ ಸರ್ವೇ ನಂ.46 ರಲ್ಲಿ 25X35 ವಿಸ್ತೀರ್ಣ ಇರುತ್ತದೆ.

ಪ್ರತಿವಾದಿ ವಾಸವಿರುವ ಮನೆ ನನ್ನ ತಂದೆ ಕಟ್ಟಿಸಿರುತ್ತಾರೆ. ಸದರಿ ಮನೆ ಪ್ರತಿವಾದಿಯ ತಮ್ಮನ ಹೆಸರಿನಲ್ಲಿರುತ್ತದೆ. ಸದರಿ ಮನೆಯ ಕುರಿತು ಕಂದಾಯ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಹಾಜರುಪಡಿರುವ ದಾಖಲೆಗಳು ಪ್ರತಿವಾದಿ ವಾಸವಿರುವ ಮನೆಗೆ ಸಂಬಂಧಿಸಿದ್ದು, ದಾವಾ ಆಸ್ತಿಗೆ ಅಲ್ಲ ಎಂದರೆ ಸರಿಯಲ್ಲ. ನನ್ನ ತಾತನ ಹೆಸರಿಗೆ ಮನೆ ಇದ್ದ ಕುರಿತು, ಖಾತೆ ಎಕ್ಸಟ್ರಾಕ್ಟ ಹಾಜರುಪಡಿಸಿರುತ್ತೇನೆ. ಸದರಿ ಮನೆಯ ಖಾತೆ ನನ್ನ ತಾತನ ಹೆಸರಿಗೆ ನನ್ನ ತಾತ ಫವತಿಯಾಗುವವರೆಗೂ ಇತ್ತು.

ನನ್ನ ತಾತ ಸುಮಾರು 1965 ಅಥವಾ 1968 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಾತ ಮರಣ ಹೊಂದಿದ ಕುರಿತು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ತಾತನ ಹೆಸರಿನಲ್ಲಿದ್ದ ಪಂಚಾಯಿತಿ ದಾಖಲೆಗಳನ್ನು ನೀಡುವಂತೆ ಕೇಳಲಾಗಿತ್ತೇ ಎಂದರೆ ಸಾಕ್ಷಿಯು ಆಗ ಆ ವ್ಯವಸ್ಥೆ ಇರಲಿಲ್ಲ ಆದ ಕಾರಣ ಕೇಳಿಲ್ಲ ಎಂದು ನುಡಿಯುತ್ತಾರೆ. ನನ್ನ ತಾತ ಬದುಕಿದ್ದಾಗ ಕಂದಾಯ ಕಟ್ಟಿರುವ ಕುರಿತು ದಾಖಲೆ ಹಾಜರುಪಡಿಸಿರುವುದಿಲ್ಲ. ನನ್ನ ತಾತ ಮರಣ ಹೊಂದಿದ ನಂತರ ಅವರ ಹೆಸರಿನಲ್ಲಿದ್ದ ಖಾತೆ ಎಷ್ಟು ವರ್ಷ ಇತ್ತು ಎಂದರೆ ಸಾಕ್ಷಿಯು 1969-70 ರಲ್ಲಿ ತನ್ನ ದೊಡ್ಡಪ್ಪನ ಹೆಸರಿಗೆ ಖಾತೆ ಆಗಿತ್ತು ಎಂದು ನುಡಿಯುತ್ತಾರೆ. ನನ್ನ ದೊಡ್ಡಪ್ಪನ ಹೆಸರಿಗೆ ತರೀಕೆರೆ ಮಂಡಲ ಪಂಚಾಯಿತಿಯಲ್ಲಿ ಖಾತೆ ಇತ್ತು. ನನ್ನ ದೊಡ್ಡಪ್ಪನ ಹೆಸರು ಲಕ್ಕಣ್ಣ ಊರುಫ್ ಬಜ್ಜಯ್ಯ. ಸದರಿಯವರ ಹೆಸರಿನಲ್ಲಿದ್ದ ಖಾತೆ ನಂ.226/1. ಸದರಿ ದಾಖಲೆಯನ್ನು ನ್ಯಾಯಾಲಯಕಕ್ಷ್

ಹಾಜರುಪಡಿಸಿದ್ದೇನೆ. ನನ್ನ ದೊಡ್ಡಪ್ಪನ ಹೆಸರಿನಲ್ಲಿದ್ದ ಖಾತೆ ನನ್ನ ತಂದೆಯ ಹೆಸರಿಗೆ 1971 ರಲ್ಲಿ ಕ್ರಯ ವಾದ ನಂತರ ನನ್ನ ತಂದೆಗೆ ಖಾತೆ ಆಗಿರುತ್ತದೆ. ನನ್ನ ತಂದೆಯ ಹೆಸರಿಗೆ ಖಾತೆ ಆಗಿರುವ ಕುರಿತು ದಾಖಲೆ ಹಾಜರುಪಡಿಸಿರುವುದಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಕಂದಾಯ ಪಾವತಿಸಿದ ಕುರಿತು ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಅವರ ಪರವಾಗಿ ತಾವೇ ಪಾವತಿಸುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾನು ಯಾವುದೇ ಕಂದಾಯ ಪಾವತಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.2 ರ ಆಸ್ತಿಗೂ ದಾವಾ ಆಸ್ತಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯ ಹೆಸರಿಗೆ 25-30 ವರ್ಷಗಳ ಹಿಂದೆ ಖಾತೆ ಆಗಿರುತ್ತದೆ. ಪ್ರತಿವಾದಿಗೆ 4 ಜನ ಸಹೋದರರು ಇರುತ್ತಾರೆ. ಸದರಿಯವರು ವಿಭಾಗವಾದ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಬಾಯಿ ಮಾತಿನಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಪಂಚಾಯಿತಿಯವರು ಬಾಯಿ ಮಾತಿನ ಆಧಾರದ ಮೇಲೆ ಖಾತೇ ಮಾಡುವುದಿಲ್ಲ ಎಂದರೆ ಸಾಕ್ಷಿಯು ತನ್ನ ತಂದೆ ಒಂದು ಪ್ರಮಾಣ ಪತ್ರ ಮಾಡಿಕೊಟ್ಟಂತೆ ಖಾತೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪ್ರಮಾಣ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಪ್ರಮಾಣ ಪತ್ರ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಪ್ರಮಾಣ ಪತ್ರವನ್ನು ಪ್ರತಿವಾದಿ ಹಾಗೂ ಅವರ ಸಹೋದರರು ಖಾತೆ ಮಾಡಿಸಿಕೊಳ್ಳುವಾಗ ಸಂಬಂಧಿಸಿದ ಇಲಾಖೆಗೆ ನೀಡಿರುತ್ತಾರೆ. ಸಂಬಂಧಪಟ್ಟ ಇಲಾಖೆಗೆ

ಅರ್ಜಿ ಸಲ್ಲಿಸಿ ಸದರಿ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.